# ಜಾಣ ಬ್ಯಾಟ್ಸ್‌ಮನ್‌ಗಳ ಮೆರವಣಿಗೆ

‘ನನ್ನೊಳಗೊಂದು ಮೊಸಳೆ ಉಸಿರಾಡುತ್ತಿರುತ್ತದೆ’ ಎಂದು ಒಂದೊಮ್ಮೆ ಸಚಿನ್ ತೆಂಡೂಲ್ಕರ್ ತಮಾಷೆಯಾಗಿ ಹೇಳಿಕೊಂಡಿದ್ದರು. ಅವರ ಮಂದಹಾಸ ಕಂಡವರಿಗೆ, ತಣ್ಣಗಿನ ಮಾತು ಕೇಳಿದವರಿಗೆ ಮೊಸಳೆಯ ಹಲ್ಲುಗಳು ಅವರ ಬಾಯಲ್ಲಂತೂ ಕಂಡಿರಲಿಕ್ಕಿಲ್ಲ. ಆದರೆ, ಅವರು ಅದನ್ನು ಹೇಳಿದ್ದು ತಮ್ಮ ಪಟ್ಟಿನ ಕುರಿತು. ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಆಟ ನೋಡಿದರೆ ಅವರೊಳಗೂ ಒಂದು ಮೊಸಳೆ ಇರಬಹುದೆನ್ನಿಸಿತು!

ವಿಲಿಯಮ್ಸನ್ ಸ್ಫುರದ್ರೂಪಿ. ಅವರ ಕೆಂಚಗಿನ ಗಡ್ಡದೊಳಗೆ ಹುದುಗಿದ ಗೆರೆಗಳ ಲೆಕ್ಕಾಚಾರವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ. ಅದು ದಕ್ಷಿಣ ಆಫ್ರಿಕಾ ಹಾಗೂ ವೆಸ್ಟ್‌ಇಂಡೀಸ್‌ನ ಬೌಲರ್‌ಗಳಿಗೂ ಕಳೆದ ಎರಡು ವಾರಗಳಲ್ಲಿ ಗೊತ್ತಾಯಿತು. ಒತ್ತಡದ ಸಂದರ್ಭದಲ್ಲಿ ಒಂದು ಸಿಕ್ಸರ್ ಹೊಡೆದ ವಿಲಿಯಮ್ಸನ್ ತಮ್ಮ ತಂಡವನ್ನು ವಿಶ್ವಕಪ್ ಪಾಯಿಂಟ್ ಪಟ್ಟಿಯಲ್ಲಿ ಮೇಲೇರುವಂತೆ ನೋಡಿಕೊಂಡರು. ರಬಾಡಾ, ಮಾರಿಸ್, ಲುಂಗಿ ಗಿಡಿ ತರಹದ ಬೌಲರ್‌ಗಳ ಕಿಚ್ಚನ್ನು ತಮ್ಮ ತಣ್ಣಗಿನ ಮಂದಹಾಸದಿಂದಲೇ ಮುಗಿಸಿಬಿಡುವ ವಿಲಿಯಮ್ಸನ್ ತರಹದ ಬ್ಯಾಟ್ಸ್‌ಮನ್‌ಗಳು ಈ ಸಲದ ವಿಶ್ವಕಪ್‌ನಲ್ಲಿ ಗಮನಾರ್ಹ ಕಾಣ್ಕೆ ಸಲ್ಲಿಸುತ್ತಿದ್ದಾರೆ.

ಪಾಕಿಸ್ತಾನದ ಬೌಲರ್‌ಗಳು ನಿರುತ್ತರರಾದಂತೆ ಬೌಲಿಂಗ್ ಮಾಡುವಾಗ ವ್ಯಕ್ತಗೊಂಡದ್ದು ರೋಹಿತ್ ಶರ್ಮ ‘ಪುಲ್ಲಿಂಗ್ ಪವರ್’. ದಕ್ಷಿಣ ಆಫ್ರಿಕಾ ಎದುರು ಕೂಡ ಅವರ ಸೋಮಾರಿತನ ಬೆರೆತಂಥ ವಿಶೇಷ ಟೈಮಿಂಗ್ ಫಲ ಕೊಟ್ಟಿದ್ದನ್ನು ನಾವು ಕಂಡಿದ್ದೇವೆ. ಎಜ್‌ಬಾಸ್ಟನ್‌ನ ಪರೀಕ್ಷೆಗೊಡ್ಡುವ ನೆಲದಲ್ಲಿ ವಿಲಿಯಮ್ಸನ್ ಆಡಿದ ರೀತಿಯಲ್ಲೂ ಜಾಣತನವೊಂದು ವ್ಯಕ್ತಗೊಂಡಿತು. ವೆಸ್ಟ್‌ಇಂಡೀಸ್ ಕೊಟ್ಟ 320ಕ್ಕೂ ಹೆಚ್ಚು ರನ್‌ಗಳ ಸವಾಲನ್ನು ಬಾಂಗ್ಲಾದೇಶದವರು ಇನ್ನೂ ಎಂಟೂ ಚಿಲ್ಲರೆ ಓವರ್‌ಗಳು ಇರುವಾಗಲೇ ಹೊಡೆದು ಮುಗಿಸುತ್ತಾರೆ ಎಂದು ಈ ಮುಂಚೆ ಯಾರಾದರೂ ಯೋಚಿಸಲು ಸಾಧ್ಯವಿತ್ತೇ?

ಟ್ವೆಂಟಿ–20 ಎಂಬ ಚುಟುಕು ಕ್ರಿಕೆಟ್ ಕೊಟ್ಟಿರುವ ಆತ್ಮಬಲವಿದು. ಬ್ಯಾಟ್ಸ್‌ಮನ್‌ಗಳು ಈಗ ಮೊದಲಿಗಿಂತ ಹೆಚ್ಚು ಸಲೀಸಾಗಿ ಕೈಗಳನ್ನು ಸಡಿಲಿಸುತ್ತಾರೆ. ಎದುರಾಳಿ ಬೌಲರ್‌ಗಳ ಅನುಭವಕ್ಕೂ ಗೌರವ ಕೊಡಲಾರದಷ್ಟು ಧಾರ್ಷ್ಟ್ಯ. ಪಾಯಿಂಟ್, ಕವರ್ಸ್ ತಲೆ ಮೇಲೆ ಚೆಂಡನ್ನು ಹೊಡೆದರೆ ತರಬೇತುದಾರರು ಬ್ಯಾಟ್ಸ್‌ಮನ್‌ಗಳ ತಲೆಗೆ ಮೊಟಕುತ್ತಿದ್ದ ಕಾಲವೊಂದಿತ್ತು. ಈಗ ಕಾಣುವುದು

**ಈ ಸಲದ ವಿಶ್ವಕಪ್‌ನಲ್ಲಿ ಶಾರ್ಟ್ ಬಾಲ್‌ಗಳಿಗೆ ಸೊಗಸಾದ ಪುಲ್ ಹಾಗೂ ಹುಕ್‌ಗಳ ಉತ್ತರವನ್ನು ಅನುಭವಿ ಬ್ಯಾಟ್ಸ್‌ಮನ್‌ಗಳು ಕೊಟ್ಟಿದ್ದಾರೆ. ಶಕೀಬ್ ಅಲ್ ಹಸನ್ ತಾವೇಕೆ ವಿಶ್ವದ ಶ್ರೇಷ್ಠ ಆಲ್‌ರೌಂಡರ್ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ಇನ್ನು ವಾರ್ನರ್, ಆ್ಯರನ್ ಫಿಂಚ್, ರೋಹಿತ್ ಶರ್ಮ, ವಿಲಿಯಮ್ಸನ್ ಕಡೆ ನೋಡಿದರೆ ಬ್ಯಾಟ್ಸ್‌ಮನ್‌ಗಳ ಮೆರವಣಿಗೆ ಕಳೆಗಟ್ಟಿರುವುದು ಅರ್ಥವಾಗುತ್ತದೆ.**

■ ವಿಶಾಖ ಎನ್.



ಆಸ್ಟ್ರೇಲಿಯಾದ ಬ್ಯಾಟಿಂಗ್ ಶಕ್ತಿ ಡೇವಿಡ್ ವಾರ್ನರ್